"ಮಧುರ ಮಕ್ಕಳೇ ನೆನಪಿನ ಅಭ್ಯಾಸವನ್ನು ಸಹಜ ಮಾಡಿಕೊಳ್ಳಲು ತಂದೆಯನ್ನು ಕೆಲವುಬಾರಿ ತಂದೆಯ ರೂಪದಲ್ಲಿ, ಕೆಲವೊಮ್ಮೆ ಟೀಚರ್ ರೂಪದಲ್ಲಿ ಮತ್ತೆ ಕೆಲವುಬಾರಿ ಸದ್ಗುರುವಿನ ರೂಪದಲ್ಲಿ ನೆನಪು ಮಾಡಿ"

ಪ್ರಶ್ನೆ: ತಾವು ಮಕ್ಕಳು ಈಗ ಪೂರ್ಣ ವಿಶ್ವದಲ್ಲಿ ಯಾವ ಡಂಗೂರ ಬಾರಿಸಬೇಕು?

ಉತ್ತರ: ಈಗ ಸುಖದ ಜಗತ್ತಿನ ರಚಯಿತ ಸ್ವಯಂ ರಾಜಯೋಗ ಕಲಿಸಲು ಬಂದಿದ್ದಾರೆ. ಅವರು ಮಕ್ಕಳಿಗೆ ಕೈಯಲ್ಲಿ ಸ್ವರ್ಗ ತಂದಿದ್ದಾರೆ. ಆದ್ದರಿಂದ ರಾಜಯೋಗ ಕಲಿಯಿರಿ ಎಂದು ಡಂಗೂರ ಬಾರಿಸಿ. ಮಕ್ಕಳೇ ಈಗ ನಿಮ್ಮದು 84 ಜನ್ಮ ಪೂರ್ಣ ಆಯಿತು. ನೀವು ನನ್ನ ಸ್ವರ್ಗಕ್ಕೆ ನಡೆಯಬೇಕು ಎಂದು ತಂದೆ ಸ್ವಯಂ ಹೇಳುತ್ತಾರೆ. ಆದ್ದರಿಂದ ದೇಹಬಾನವನ್ನು ಬಿಟ್ಟು ಅಶರೀರಿ ಆಗಿ. ದೈವೀಗುಣವನ್ನು ಧಾರಣೆ ಮಾಡಿದ್ದೇ ಆದರೆ ದೈವೀ ಜಗತ್ತಿಗೆ ಹೋಗುತ್ತೀರಿ.

ಗೀತೆ: ನನ್ನ ಮನಸ್ಸಿನ ಬಾಗಿಲಿನಲ್ಲಿ ಯಾರು ಬಂದಿದ್ದಾರೆ.............

ಓಂ ಶಾಂತಿ. ಮಧುರಾತಿ ಮಧುರ ಮಕ್ಕಳು ಹಾಡನ್ನು ಕೇಳಿದ್ದೀರಾ? ಈಗ ನಮ್ಮ ಬುದ್ಧಿಯಲ್ಲಿ ಯಾರ ನೆನಪು ಬಂದಿದೆ? ಎಲ್ಲರ ಬುದ್ಧಿಯಲ್ಲಿ ಪತಿತಪಾವನ ಒಬ್ಬ ತಂದೆಯೇ ಆಗಿದ್ದಾರೆ ಎನ್ನುವುದೇ ಇದೆ. ಇಂಗ್ಲೀಷಿನಲ್ಲಿ ಅವರಿಗೆ ಮುಕ್ತಿದಾತ ಎಂದು ಹೇಳಲಾಗುತ್ತದೆ. ದುಃಖದಿಂದ ಮುಕ್ತರನ್ನಾಗಿ ಮಾಡುತ್ತಾರೆ. ದುಃಖಹರ್ತ ಸುಖಕರ್ತ ಆಗಿದ್ದಾರೆ. ಇದು ಯಾವುದೇ ಮನುಷ್ಯ ಅಥವಾ ದೇವತೆಯರ ಹೆಸರಲ್ಲ. ಇದು ಒಬ್ಬ ಪತಿತಪಾವನ ತಂದೆಯ ಮಹಿಮೆಯಾಗಿದೆ. ಪತಿತಪಾವನ ಎಂದು ತಂದೆಯಾದ ಭಗವಂತನಿಗೆ ಹೇಳಲಾಗುತ್ತದೆ. ಮನುಷ್ಯರಿಗೆ ಈ ಮಹಿಮೆ ಇರಲು ಸಾಧ್ಯವಿಲ್ಲ. ಲಕ್ಷ್ಮೀ-ನಾರಾಯಣರಿಗೆ ಈ ಮಹಿಮೆ ಇರಲು ಸಾಧ್ಯವಿಲ್ಲ. ಬ್ರಹ್ಮಾ-ವಿಷ್ಣು-ಶಂಕರರಿಗೆ ಪತಿತಪಾವನ ಎಂದು ಹೇಳಲು ಸಾಧ್ಯವಿಲ್ಲ. ಪತಿತಪಾವನ ಶ್ರೇಷ್ಠಾತಿಶ್ರೇಷ್ಠ ಒಬ್ಬರೇ ಆಗಿದ್ದಾರೆ. ಪರಮಪಿತ ಪರಮಾತ್ಮ ಅವರ ಹೆಸರು ಶ್ರೇಷ್ಠ ಅಂದಾಗ ಅವರು ಇರುವ ಸ್ಥಾನವೂ ಶ್ರೇಷ್ಠ ಆಗಿದೆ. ಇವರು ನಮ್ಮ ಬಾಬಾ ಎಂದು ನಿಮಗೆ ನಿಶ್ಚಯವಿದೆ. ಶಿವನಿಗೆ ಬಾಬಾ ಎಂದು ಹೇಳಲಾಗುತ್ತದೆ. ಶಿವನೇ ನಿರಾಕಾರನಾಗಿದ್ದಾನೆ. ಶಿವನ ಚಿತ್ರ ಬೇರೆ, ಆ ಶಿವ ತಂದೆ, ಶಿಕ್ಷಕ, ಸದ್ಗುರು ಆಗಿದ್ದಾರೆ. ಇಂದು ಸದ್ಗುರುವಾರ ಆಗಿದೆ. ನಿಮಗಂತೂ ಪ್ರತಿನಿತ್ಯ ಸದ್ಗುರುವಾರವೇ. ಸದ್ಗುರು ನಿಮಗೆ ಪ್ರತಿನಿತ್ಯ ಓದಿಸುತ್ತಾರೆ ಮತ್ತು ನಿಮ್ಮ ತಂದೆ ಆಗಿದ್ದಾರೆ. ಇದು ನಿಮಗೆ ನಿಶ್ಚಯವಿರಬೇಕು. ಅವರಿಗೆ ಸರ್ವವ್ಯಾಪಿ ಎಂದು ಹೇಳಲು ಸಾಧ್ಯವಿಲ್ಲ. ಪತಿತಪಾವನ, ಪರಮಪಿತ ಪರಮಾತ್ಮ ನಮಗೆ ರಾಜಯೋಗ ಕಲಿಸುತ್ತಾರೆ ಎಂದು ನಿಮ್ಮ ಬುದ್ಧಿಯಲ್ಲಿದೆ. ಇದಂತೂ ಬುದ್ಧಿಯಲ್ಲಿ ನಿಶ್ಚಯವಿರಬೇಕು. ಒಬ್ಬ ತಂದೆಯೇ ಆಗಿದ್ದಾರೆ. ಅವರನ್ನು ಯಾವ ರೂಪದಲ್ಲಾದರೂ ನೆನಪು ಮಾಡಿ ಬುದ್ಧಿ ಮೇಲೆ ನಿರಾಕರನೆಡೆಗೆ ಹೋಗುತ್ತದೆ. ಯಾವುದೇ ಆಕಾರ ಅಥವಾ ಸಾಕಾರ ಅಲ್ಲ. ಆತ್ಮಗಳಿಗೆ ಪರಮಾತ್ಮನೊಂದಿಗೆ ಈಗ ಕೆಲಸವಿದೆ ಆದರೆ ಗೊತ್ತಿಲ್ಲ. ಅವರು ಜ್ಞಾನಸಾಗರ ಎಂದು ಹಾಡುತ್ತಾರೆ. ಅಂದಾಗ ಜ್ಞಾನಸಾಗರ ಎಂದರೆ ಯಾರು ಜ್ಞಾನವನ್ನು ಹೇಳಿ ಸದ್ಗತಿ ಮಾಡುತ್ತಾರೆ. ಲಕ್ಷ್ಮೀ-ನಾರಾಯಣರಿಗೆ ಈ ಜ್ಞಾನ ಇಲ್ಲ. ಜ್ಞಾನಸಾಗರನಿಂದ ಸಿಗುವುದೇ ಜ್ಞಾನವಾಗಿದೆ. ಆದ್ದರಿಂದ ಶಾಸ್ತ್ರಗಳಲ್ಲಿಯೂ ಜ್ಞಾನ ಇಲ್ಲ. ಜ್ಞಾನಸಾಗರನಿಗೆ ಮನುಷ್ಯ ಸೃಷ್ಟಿ ರೂಪಿ ವೃಕ್ಷಕ್ಕೆ ಬೀಜ ಎನ್ನುತ್ತಾರೆ. ತಂದೆ ರಚಯಿತನಾಗಿದ್ದಾರೆ. ಅವರು ಬೇಹದ್ದಿನ ತಂದೆ ಉಳಿದವರೆಲ್ಲರೂ ಹದ್ದಿನ ತಂದೆ ಆಗಿದ್ದಾರೆ. ಈಗ ಬೇಹದ್ದಿನ ತಂದೆಯನ್ನು ಎಲ್ಲರೂ ನೆನಪು ಮಾಡುತ್ತಾರೆ. ಯಾರು ತಂದೆಯರಿಗೂ ತಂದೆ, ಪತಿಯರಿಗೆ ಪತಿ, ಗುರುಗಳಿಗೆ ಗುರು ಆಗಿದ್ದಾರೆ. ಎಲ್ಲರೂ ಅವರನ್ನು ನೆನಪು ಮಾಡುತ್ತಾರೆ. ಸಾಧನೆ ಮಾಡುತ್ತಾರೆ. ಇಂದಿನ ದಿನಗಳಲ್ಲಿ ಚಿತ್ರಗಳು ರಾಮನ ಎದುರಿಗೆ ಶಂಕರನ ಎದುರಿಗೆ ಲಿಂಗ ಇಡುತ್ತಾರೆ. ನಿರಾಕಾರನೇ ಶ್ರೇಷ್ಠಾತಿಶ್ರೇಷ್ಠ ಅವರೇ ಮುಕ್ತ ಮಾಡುತ್ತಾರೆ. ಈಗಂತೂ ಆತ್ಮರೆಲ್ಲರೂ ಪತಿತರಾಗಿದ್ದಾರೆ. 5000 ವರ್ಷಕ್ಕೆ ಮೊದಲು ಯಾವಾಗ ಆದಿ ಸನಾತನ ದೇವೀ-ದೇವತೆಗಳ ರಾಜ್ಯ ಇತ್ತೋ ಆಗ ಒಂದೇ ರಾಜ್ಯ ಇತ್ತು ಸುಖಧಾಮವಿತ್ತು. ಪವಿತ್ರತೆ-ಸುಖ-ಶಾಂತಿ ಎಲ್ಲವೂ ಇತ್ತು. ಅದರ ಹೆಸರೇ ಸ್ವರ್ಗ ಎಂದು. ಸ್ವರ್ಗಕ್ಕೆ ಸೂಕ್ಷ್ಮವತನ ಅಥವಾ ಮೂಲವತನ ಎಂದು ಹೇಳುವುದಿಲ್ಲ. ಸ್ವರ್ಗಕ್ಕೆ ವಿರುದ್ಧವಾದದ್ದು ನರಕ. ಇದನ್ನು ಬುದ್ಧಿಯಲ್ಲಿ ಇಟ್ಟುಕೊಳ್ಳಬೇಕು. ಒಬ್ಬ ಬೇಹದ್ದಿನ ತಂದೆಯನ್ನೇ ನೆನಪು ಮಾಡಬೇಕು. ಅವರಿಂದಲೇ ಆಸ್ತಿ ಸಿಗುತ್ತದೆ. ಸದ್ಗುರು ರಾಜಯೋಗ ಕಲಿಸುತ್ತಾರೆ. ಪಾವನ ಜಗತ್ತಿನಲ್ಲಿ ಕರೆದುಕೊಂಡು ಹೋಗುತ್ತಾರೆ. ಒಬ್ಬರದೇ ಎಷ್ಟೊಂದು ಮಹಿಮೆ ಇದೆ. ಲಕ್ಷ್ಮೀ-ನಾರಾಯಣರಿಗೆ ಈ ಮಹಿಮೆ ಕೊಡಲು ಸಾಧ್ಯವಿಲ್ಲ. ನಿರಾಕಾರ ತಂದೆ ಒಬ್ಬರೇ ಆಗಿದ್ದಾರೆ. ಶರೀರದಿಂದ ಭಿನ್ನವಾದಾಗ ಎಲ್ಲಾ ಆತ್ಮಗಳು ನಿರಾಕಾರ ಆಗಿರುತ್ತಾರೆ. ತಂದೆ ಹೇಳುತ್ತಾರೆ ತಾವು ಶರೀರವನ್ನು ಪಡೆದು ಪಾತ್ರ ಮಾಡುತ್ತೀರಿ. ತಾವು ಎಷ್ಟು ಜನ್ಮಗಳು ಪಾತ್ರ ಮಾಡುತ್ತೀರೋ ಅದನ್ನೂ ತಿಳಿದುಕೊಂಡಿದ್ದೀರಿ. ಬ್ರಹ್ಮನಿಗೂ ವಸ್ತ್ರವಿದೆ, ಸೂಕ್ಷ್ಮವತನದಲ್ಲಿಯೂ ವಸ್ತ್ರವಿದೆ. ಶರೀರವೇ ವಸ್ತ್ರವಲ್ಲವೇ. ಅದರಲ್ಲಿಯೂ ಆತ್ಮವಿದೆ. ಭೂತದಲ್ಲೂ ಆತ್ಮವಿದೆ. ನೆರಳಿನ ಹಾಗೆಯೇ ಸುತ್ತುತ್ತಿರುತ್ತದೆ. ಬ್ರಹ್ಮಾ-ವಿಷ್ಣು-ಶಂಕರರಿಗೂ ಸಹ ಶರೀರವಿದೆ. ನನಗೆ ನಿರಾಕಾರನೆಂದು ಹೇಳುತ್ತೀರಿ. ಯಾರಿಗಾದರೂ ಸಹ ಹೇಳಿ ನಿಮಗೆ ಇಬ್ಬರು ತಂದೆಯರಿದ್ದಾರೆ, ನಿಮಗೂ ಸಹ ಇಬ್ಬರು ತಂದೆಯರು ಇದ್ದಾರೆಂದು ಮಕ್ಕಳಿಗೆ ತಿಳಿಸಲಾಗಿದೆ. ಎಲ್ಲರೂ ಆ ಬೇಹದ್ದಿನ ತಂದೆಯನ್ನು ನೆನಪು ಮಾಡುತ್ತಾರೆ. ಲೌಕಿಕ

ತಂದೆಯರಂತೂ ಅನೇಕರಿದ್ದಾರೆ, ಬೇಹದ್ದಿನ ತಂದೆ ಒಬ್ಬರೇ ಆಗಿದ್ದಾರೆ. ತಂದೆಯನ್ನು ಮರೆತುಬಿಟ್ಟರೆ ಟೀಚರ್‌ನ್ನು ನೆನಪು ಮಾಡಿ, ಟೀಚರ್‌ನ್ನು ಮರೆತುಬಿಟ್ಟರೆ ಸದ್ಗುರುವಿನ ನೆನಪು ಇರಲಿ.

ಭಾರತ ಈಗ ಪತಿತ ಆಗಿದೆ ಎಂದು ತಂದೆ ತಿಳಿಸುತ್ತಾರೆ. ಮೊದಲು ಪಾವನ ಆಗಿದ್ದಾಗ ಇಷ್ಟೊಂದು ಆತ್ಮಗಳು ಎಲ್ಲಿ ನಿವಾಸ ಮಾಡುತ್ತಿದ್ದರು? ಮುಕ್ತಿಧಾಮ, ವಾನಪ್ರಸ್ಥ ಸ್ಥಿತಿಯಲ್ಲಿ ಅರ್ಥಾತ್ ವಾಣಿಯಿಂದ ದೂರ ಹೋಗಲು, ನಮ್ಮನ್ನು ನಿರ್ವಾಣಧಾಮಕ್ಕೆ ತಲುಪಿಸಲಿ ಎಂದು ಗುರುವಿನ ಆಶ್ರಯವನ್ನು ಪಡೆದುಕೊಳ್ಳುತ್ತಾರೆ ಆದರೆ ನಿರ್ವಾಣಧಾಮಕ್ಕೆ ತಲುಪಿಸಲು ಸಾಧ್ಯವಿಲ್ಲ. ವೃಕ್ಷವಂತೂ ವೃದ್ಧಿ ಆಗುತ್ತಲೇ ಇರುತ್ತದೆ. ಭಾರತದ್ದು ಮುಖ್ಯ ಪಾತ್ರವಾಗಿದೆ, ಅದರಲ್ಲೂ ಆದಿ ಸನಾತನ ದೇವೀ-ದೇವತಾ ಧರ್ಮದವರು ಯಾರಿದ್ದಾರೋ ಅವರು 84 ಜನ್ಮಗಳನ್ನು ಪಡೆದುಕೊಳ್ಳುತ್ತಾರೆ. ಆತ್ಮ-ಪರಮಾತ್ಮ ಬಹಳಕಾಲ ಅಗಲಿ ಹೋದರು........ ಅಂದಾಗ ಲೆಕ್ಕ ಮಾಡಬೇಕು. ಬಹಳ ಕಾಲ ಅರ್ಥಾತ್ ಮೊಟ್ಟ ಮೊದಲು ಯಾರು ಈ ಸೃಷ್ಟಿ ಮೇಲೆ ಪಾತ್ರ ಮಾಡಲು ಬಂದಿದ್ದಾರೋ. ಅವರೇ 84 ಜನ್ಮಗಳನ್ನು ಪಡೆದುಕೊಳ್ಳುತ್ತಾರೆ. 84ಜನ್ಮಗಳ ಚಕ್ರ ಎಂದು ಹೇಳಲಾಗುತ್ತದೆ, 84 ಲಕ್ಷದ ಚಕ್ರ ಎಂದು ಹೇಳುವುದಿಲ್ಲ. ತಾವು ಮಕ್ಕಳಿಗೆ 84 ಜನ್ಮಗಳ ಚಕ್ರದ ಕುರಿತು ತಿಳಿಸಲಾಗಿದೆ, ಮೊದಲು ಗೊತ್ತಿರಲಿಲ್ಲ. ಇವರನ್ನು ಕೇಳಿದರೆ ಇವರ ಆತ್ಮಕ್ಕೂ ಸಹ ಗೊತ್ತಿದೆಯಲ್ಲವೆ. ಇಬ್ಬರ ಆತ್ಮಗಳ ರಹಸ್ಯವೂ ಸಹ ತಿಳಿಸಲಾಗಿದೆ. ಬೇರೆ ಆತ್ಮ ಪ್ರವೇಶ ಮಾಡಬಹುದು. ಅಶುದ್ಧ ಆತ್ಮನ ಪ್ರವೇಶತೆಯೂ ಸಹ ಆಗಬಹುದು. ಅಂದಾಗ ಪರಮಪಿತ ಪರಮಾತ್ಮನೂ ಸಹ ಬರಬಹುದು. ನಾನು ನಿರಾಕಾರ ನಾನು ಬಂದಿಲ್ಲವೆಂದರೆ ಹೇಗೆ ರಾಜಯೋಗವನ್ನು ಕಲಿಸುವುದು ಎಂದು ತಂದೆಯು ಹೇಳುತ್ತಾರೆ. ನನಗೆ ಜ್ಞಾನಸಾಗರ ಎಂದು ಹೇಳುತ್ತಾರೆ, ಮನುಷ್ಯರು ಸ್ವರ್ಗದ ಸ್ಥಾಪನೆಯಂತೂ ಮಾಡುವುದಿಲ್ಲವಲ್ಲವೇ. ತಂದೆಗೆ ಹೆವನ್ಲಿ ಗಾಡ್ ಫಾದರ್ ಎಂದು ಕರೆಯುತ್ತಾರೆ. ವೈಕುಂಠದ ರಾಜಧಾನಿಯಾಗಿದೆ. ಒಬ್ಬರೇ ಅಲ್ಲವಲ್ಲವೆ. ಶ್ರೀಕೃಷ್ಣ ನಂಬರ್ವನ್ ರಾಜಕುಮಾರ ಸತೋಪ್ರಧಾನ. ಸತೋಪ್ರಧಾನರಿಗೆ ಮಹಾತ್ಮರು ಎಂದು ಕರೆಯಲಾಗುತ್ತದೆ. ಒಬ್ಬರಿಗೇ ಕುಮಾರ-ಕುಮಾರಿಯರು ಎಂದು ಕರೆಯಲಾಗುತ್ತದೆ. ಕುಮಾರಿಯರಿಗೆ ಬಹಳ ಮಾನ್ಯತೆ ಇದೆ. ನಿಶ್ಚಿತಾರ್ಥದ ನಂತರ ಭಲೆ ಪವಿತ್ರವಾಗಿದ್ದರೂ ಸಹ ದಂಪತಿಯರಾದರಲ್ಲವೆ. ನಂತರ ಕುಮಾರಿಯ ಹೆಸರು ಬದಲಾವಣೆ ಆಗಿಬಿಡುತ್ತದೆ. ನಂತರ ತಂದೆ-ತಾಯಿ ಆಗಿಬಿಡುತ್ತಾರೆ. ಮಕ್ಕಳಾದಾಗ ಮಾತಾ-ಪಿತ ಎಂದು ಕರೆಯುತ್ತಾರೆ. ಮದುವೆ ನಂತರ ಇವರು ಮಾತಾ-ಪಿತ ಎಂದು ತಿಳಿದುಕೊಳ್ಳುತ್ತಾರೆ, ಸಂತಾನ ಇದ್ದಾರೆ ಎಂದು ಗೊತ್ತಾಗುತ್ತದೆ (ಅನ್ಡಸ್ಟುಡ್). ನಂತರ ಅವರಿಗೆ ಕುಮಾರ-ಕುಮಾರಿ ಎಂದು ಹೇಳುವುದಿಲ್ಲ.

ಕೃಷ್ಣಪುರಿ ಸ್ಥಾಪನೆ ಆಗುತ್ತಿದೆ ಎಂದು ಈಗ ನೀವು ಮಕ್ಕಳಿಗೆ ಗೊತ್ತಿದೆ. ಅಲ್ಲಿ ಒಂದೇ ದೇವೀ-ದೇವತಾ ಧರ್ಮವಿದೆ. ಬಾಕಿ ಪ್ರತಿಯೊಬ್ಬರ ಧರ್ಮದ ಶಾಸ್ತ್ರವೂ ಸಹ ಬೇರೆ-ಬೇರೆ ಆಗಿದೆ. ಇಂತಹವರ ಧರ್ಮಶಾಸ್ತ್ರ ಇದಾಗಿದೆ, ನಾವು ಇಂತಹವರ ಧರ್ಮ ಅಥವಾ ಮಠಕ್ಕೆ ಹೋಗುತ್ತೇವೆ ಎಂದು ಹೇಳುತ್ತಾರೆ. ಆತ್ಮಗಳು ಬಂದು ತಮ್ಮ ಪಾರ್ಟ್‌ನ್ನು ಮಾಡಬೇಕಾಗುತ್ತದೆ. ಯಾರನ್ನಾದರೂ ಕೇಳಿ ಗುರುನಾನಕ್ ಯಾವಾಗ ಬರುತ್ತಾರೆ? ಎಂದು ಕೇಳಿ. ಅವರು ಜ್ಯೋತಿ ಜ್ಯೋತಿಯಲ್ಲಿ ಲೀನವಾಗುತ್ತದೆ ಎಂದು ಹೇಳುತ್ತಾರೆ. ಮತ್ತೆ ಅವರು ಬರಬೇಕಾಗಿಲ್ಲವೇನು? ಸೃಷ್ಟಿ ಚಕ್ರ ಹೇಗೆ ಪುನರಾವರ್ತನೆ ಆಗುತ್ತದೆ? ಗುರುನಾನಕ್ನ ಆತ್ಮ ಬಂದಾಗ ಅವರ ಹಿಂದೆ ಸಿಕ್ಖ್ ಧರ್ಮದವರು ಬರುತ್ತಿರುತ್ತಾರೆ. ಈಗಂತೂ ನೋಡಿ ಎಷ್ಟೊಂದು ಆಗಿಬಿಟ್ಟಿದೆ! ನಂತರವೂ ಸಹ ರಿಪೀಟ್ ಆಗುತ್ತದೆಯಲ್ಲವೆ. ಹೇಳಿ ನಂತರ ಯಾವಾಗ ಬರುತ್ತದೆ? ಎಂದು ಕೇಳಿದಾಗ ಹೇಳಲು ಸಾಧ್ಯವಿಲ್ಲ. ನೀವು ಹೇಳುತ್ತೀರಿ - ಇದು 5000 ವರ್ಷದ ಚಕ್ರವಾಗಿದೆ. ಗುರುನಾನಕ್ ಬಂದು 5000 ವರ್ಷ ಆಗಿದೆ, ನಂತರ 4500 ವರ್ಷದ ನಂತರ ಸಿಕ್ಖ್ ಧರ್ಮವನ್ನು ಸ್ಥಾಪನೆ ಮಾಡುತ್ತಾರೆ. ನಾವು ಆದಿಸನಾತನ ದೇವೀ ದೇವತಾ ಧರ್ಮವನ್ನು ಸ್ಥಾಪನೆ ಮಾಡುತ್ತೇವೆ. ನಂತರ ಉಳಿದವರೂ ಸಹ ನಂಬರ್ವಾರಾಗಿ ಬಂದು ಧರ್ಮ ಸ್ಥಾಪನೆ ಮಾಡುತ್ತಾರೆ. ನಮ್ಮ ಬುದ್ಧಿಯಲ್ಲಿ ಇಷ್ಟೊಂದು ಕುಳಿತುಕೊಳ್ಳುವುದಿಲ್ಲ ಎಂದು ಕೆಲವು ಮಕ್ಕಳು ಹೇಳುತ್ತಾರೆ. ಒಳ್ಳೆಯದು, ಸ್ವಲ್ಪ ಮಾತುಗಳಂತೂ ಕುಳಿತುಕೊಳ್ಳುತ್ತದೆಯಲ್ಲವೆ. ಭಕ್ತರ ಭಗವಂತ ಒಬ್ಬರೇ ಆಗಿದ್ದಾರೆ. ಪಾಪಾತ್ಮ, ಪುಣ್ಯಾತ್ಮ ಎಂದು ಹೇಳಲಾಗುತ್ತದೆ. ಪರಮಾತ್ಮ ಎಂದು ಯಾರಿಗೂ ಕರೆಯಲಾಗುವುದಿಲ್ಲ. ಆತ್ಮ ಹೋಗಿ ಪರಮಾತ್ಮ ಆಗುತ್ತದೆ ಈ ರೀತಿ ಆಗುವುದಿಲ್ಲ. ತುಂತುರು ಮಳೆ ಹೋಗಿ ಸಾಗರದಲ್ಲಿ ಲೀನವಾಗಿಬಿಡುತ್ತದೆ ಎಂದು ಉದಾಹರಣೆ ಕೊಡುತ್ತಾರೆ. ಕೆಲವರು ದೂರ ನಿರ್ವಾಣಧಾಮಕ್ಕೆ ಹೋದರು ಎಂದು ಹೇಳುತ್ತಾರೆ. ಬುದ್ಧಿಗಾಗಿ ಹೇಳುತ್ತಾರೆ. . ಕೆಲವರು ಜ್ಯೋತಿ ಜ್ಯೋತಿಯಲ್ಲಿ ಸಮಾವೇಶವಾಗಿದೆ ಎಂದು ಹೇಳುತ್ತಾರೆ. ಈಗ ಯಾರು ಸರಿ? ದೂರ ನಿರ್ವಾಣಧಾಮ ಎನ್ನುವುದು ಸರಿ. ಆತ್ಮವು ನಿರಾಕಾರ ಆಗಿದೆ. ನಿರಾಕಾರ ಪ್ರಪಂಚದಲ್ಲಿ ಇರುತ್ತದೆ. ಸೂಕ್ಷ್ಮವತನದಲ್ಲಿ ಸಂಜ್ಞೆ ಇರುತ್ತದೆ. ಅದೂ ಸಹ ಅಲ್ಲಿಯ ಒಂದು ಭಾಷೆ ಆಗಿದೆ, ಯಾವುದನ್ನು ಅಲ್ಲಿ ಅವರು ಅದನ್ನು ತಿಳಿಯುತ್ತಾರೆ, ತಿಳಿದು ಡೈರೆಕ್ಷನ್ ತೆಗೆದುಕೊಂಡು ಬರುತ್ತಾರೆ. ಇದೂ ಸಹ ವಿಚಿತ್ರವಾದ ಮಾತಲ್ಲವೆ. ಸಂಜ್ಞೆ, ಮಾತು (ಟಾಕಿ) ಹಾಗೂ ಸೈಲೆನ್ಸ್ - ಮೂರು ಇದೆ. ಮೊದಲು ಸಂಜ್ಞೆಯ ಸಿನಿಮಾಗಳು ಇತ್ತು ನಂತರ ಅದರಿಂದ ಯಾರಿಗೂ ಮಜಾ ಬರದೆ ಇರುವ ಕಾರಣ ಟಾಕಿ ಮಾಡಿಬಿಟ್ಟರು. ಸೂಕ್ಷ್ಮವತನದಲ್ಲಿ ಕೇವಲ ಬ್ರಹ್ಮಾ-ವಿಷ್ಣು-ಶಂಕರರಿರುತ್ತಾರೆ. ಶ್ರೇಷ್ಠಾತಿಶ್ರೇಷ್ಠ ಪರಮಪಿತ ಪರಮಾತ್ಮ ಆಗಿದ್ದಾರೆ, ಯಾರು ಶಾಂತಿ ಪ್ರಪಂಚದಲ್ಲಿ ಇರುತ್ತಾರೆ. ನಾವು ಆತ್ಮಗಳೂ ಸಹ ಅಲ್ಲಿ ಇರುತ್ತೇವೆ. ಪತಿತಪಾವನ ಒಬ್ಬ ಸದ್ಗುರು ಆಗಿದ್ದಾರೆ. ಸರ್ವರ ಸದ್ಗತಿದಾತ ಅವರೇ ಆಗಿದ್ದಾರೆ. ಬಾಕಿ ತಮನ್ನು ತಾವು ಗುರು ಎಂದಾದರೂ ಹೇಳಿ, ಋಷಿ ಎಂದಾದರೂ ಹೇಳಿ, ಮಹಾತ್ಮರು ಎಂದಾದರೂ ಹೇಳಿ ಆದರೆ ಎಲ್ಲರೂ

ಭಕ್ತರಾಗಿದ್ದಾರೆ. ಪಾವನರನ್ನಾಗಿ ಮಾಡುವವರನ್ನು ತಿಳಿದುಕೊಂಡೇ ಇಲ್ಲ.

ಪರಮಾತ್ಮ ಎಲ್ಲರನ್ನು ಸ್ಮಶಾನದಿಂದ ಬಿಡಿಸಿ ಕರೆದುಕೊಂಡು ಹೋಗುತ್ತಾರೆಂದು ಹೇಳುತ್ತಾರೆ. ನೋಡುತ್ತಲೇ ಇದ್ದೀರಿ, ಈಗ ಅದೇ ಮಹಾಭಾರತಯುದ್ಧ ಆಗಿದೆ. ತಾವು ಸತ್ಯಯುಗಕ್ಕಾಗಿ ರಾಜಯೋಗವನ್ನು ಕಲಿಯುತ್ತಿದ್ದೀರಿ. ವಿನಾಶದ ನಂತರ ಸತ್ಯಯುಗದ ಬಾಗಿಲು ತೆರೆಯಲಾಗುತ್ತದೆ. ಈ ಸಮಯದಲ್ಲಿ ನೀವು ತಂದೆಯಿಂದ ರಾಜಯೋಗವನ್ನು ಕಲಿಯುತ್ತೀರಿ. ತಾವು ಯೋಗಬಲದಿಂದ ರಾಜ್ಯವನ್ನು ಪಡೆಯುತ್ತೀರಿ. ಇದು ಅಹಿಂಸೆ ಆಗಿದೆ. ಅಹಿಂಸೆ ಎಂದು ಯಾವುದಕ್ಕೆ ಹೇಳಲಾಗುತ್ತದೆ ಎಂದು ಯಾರಿಗೂ ತಿಳಿದಿಲ್ಲ. ಕಾಮ ಕಠಾರಿಯನ್ನೂ ಚಲಾಯಿಸಬಾರದು. ಇದೂ ಸಹ ಹಿಂಸೆಯಾಗಿದೆ. ಅಹಿಂಸೋ ಪರಮೋ ದೇವೀ-ದೇವತಾ ಧರ್ಮ ಆಗಿತ್ತು. ವಿಕಾರದ ಕಾರಣವೇ ತಾವು ಆದಿ-ಮಧ್ಯ-ಅಂತ್ಯ ದುಃಖವನ್ನು ಪಡೆದಿದ್ದೀರಿ. ಅಲ್ಲಿ ಇರುವುದೇ ನಿರ್ವಿಕಾರಿ ಪ್ರಪಂಚ. ಯಾವ ಕಾರಣದಿಂದ ಆದಿ-ಮಧ್ಯ-ಅಂತ್ಯ ದುಃಖ ಆಗುವುದಿಲ್ಲ. ಅದು ಅಮರಲೋಕ, ಇದು ಮೃತ್ಯುಲೋಕ ಆಗಿದೆ. ಮೃತ್ಯುಲೋಕದಲ್ಲಿ ಕುಳಿತು ಅಮರಲೋಕಕ್ಕೆ ಹೋಗಲು ಕಥೆಯನ್ನು ತಿಳಿಸುತ್ತಾರೆ. ತಂದೆ ನಾನು ತ್ರಿಕಾಲದರ್ಶಿ ಆಗಿದ್ದೇನೆ ಎಂದು ತಿಳಿಸುತ್ತಾರೆ. ತಮ್ಮನ್ನೂ ಸಹ ತ್ರಿಕಾಲದರ್ಶಿ, ತ್ರಿನೇತ್ರಿಯನ್ನಾಗಿ ಮಾಡುತ್ತೇನೆ ಅರ್ಥಾತ್ ಮೂರು ಲೋಕಗಳನ್ನು, ಮೂರು ಕಾಲಗಳನ್ನು ತಿಳಿದಿರುವಂತಹವರು. ಇದು ಭಗವಂತನ ಮಹಿಮೆ ಆಗಿದೆ. ತಾವು ಮಕ್ಕಳನ್ನು ತಮ್ಮ ಸಮಾನ ಮಾಡಿಕೊಂಡು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾರೆ. ಜ್ಞಾನಸಾಗರನ ಮಕ್ಕಳು ತಾವೂ ಸಹ ಮಾಸ್ಟರ್ ಜ್ಞಾನಸಾಗರರಾಗಿದ್ದೀರಿ. ತಂದೆ ತಾವು ಮನುಷ್ಯ ಸೃಷ್ಟಿಯ ಬೀಜರೂಪ, ಚೈತನ್ಯ, ನಾಲೆಜ್ಫುಲ್ ಎಂದು ತಿಳಿಸುತ್ತಾರೆ. ಬೀಜದಿಂದ ಇಂತಹ ವೃಕ್ಷ ಬರುತ್ತದೆ ನಂತರ ಫಲ ಬರುತ್ತದೆ ಎಂದು ನಾವು ತಿಳಿಯಬಹುದು. ಈಗ ಇದಾಗಿದೆ ಮನುಷ್ಯ ಸೃಷ್ಟಿಯ ವೃಕ್ಷ. ತಂದೆ ನಾನು ಉಲ್ಟಾ ವೃಕ್ಷದ ಆದಿ-ಮಧ್ಯ-ಅಂತ್ಯದ, ಸೃಷ್ಟಿಚಕ್ರವನ್ನು ತಿಳಿದಿರುವಂತಹವರು ಆಗಿದ್ದೇನೆಂದು ತಿಳಿಸುತ್ತಾರೆ. ಪರಮಾತ್ಮ ಸತ್ಯ ಆಗಿದ್ದಾರೆ, ಚೈತನ್ಯ ಆಗಿದ್ದಾರೆ, ಆನಂದದ ಸಾಗರ, ಸುಖದಸಾಗರ ಆಗಿದ್ದಾರೆ ಅಂದಾಗ ಅವರಿಂದ ಖಂಡಿತ ಆಸ್ತಿ ಸಿಗಬೇಕು ಎಂದು ಮನುಷ್ಯರು ಹೇಳುತ್ತಾರೆ. ತಾವು ತಮ್ಮ ತಂದೆಯಿಂದ ಆಸ್ತಿಯನ್ನು ಪಡೆಯುತ್ತಿದ್ದೀರಿ. 21 ಜನ್ಮಗಳಿಗಾಗಿ ನೀವು ಪಾವನರಾಗುತ್ತೀರಿ. ನಾನು ಸದಾ ಪಾವನ ಆಗಿದ್ದೇನೆ, ತಾವಂತೂ ಪಾತ್ರ ಮಾಡಬೇಕು. ಈ ಸಮಯದಲ್ಲಿ ತಮ್ಮದು ಕೇವಲ ಏರುವಕಲೆಯಾಗಿದೆ. ತಾವು ಮಾಸ್ಟರ್ ಜ್ಞಾನಸಾಗರರಾಗಿಬಿಡುತ್ತೀರಿ ನಂತರ ಸತ್ಯಯುಗದಿಂದ ತಮ್ಮ ಕಲೆಗಳು ಕಡಿಮೆ ಆಗುತ್ತಾ ಹೋಗುತ್ತದೆ. ಹತ್ತಿ ಮತ್ತು ಇಳಿಯಲೇಬೇಕು. ಈಗ ತಾವು ಮಕ್ಕಳು ಬೇಹದ್ದಿನ ತಂದೆಯಿಂದ ಬೇಹದ್ದಿನ ಆಸ್ತಿಯನ್ನು ಪಡೆಯುತ್ತಿದ್ದೀರಿ, ಬಹಳ ಸೇವೆಯನ್ನು ಮಾಡುತ್ತಿದ್ದೀರಿ. ತಂದೆ ಪತಿತಪಾವನ ಆಗಿದ್ದಾರೆ. ತಾವು ಶಿವಶಕ್ತಿ ಪಾಂಡವ ಸೇನೆ ಆಗಿದ್ದೀರಿ. ಪತಿತ ಪ್ರಪಂಚವನ್ನು ಪಾವನ ಪ್ರಪಂಚ ಮಾಡುವುದರಲ್ಲಿ ತಾವು ಸಹಯೋಗಿ ಆಗುತ್ತೀರಿ. ತಮಗೆ ವಂದೇ ಮಾತರಂ ಎಂದು ಹೇಳುತ್ತಾರೆ. ಪತಿತರನ್ನು ಎಂದೂ ವಂದೇ ಮಾತರಂ ಎಂದು ಹೇಳುವುದಿಲ್ಲ. ತಂದೆ ಬಂದು ಶಕ್ತಿದಳದ ಮುಖಾಂತರ ಗುಪ್ತ ಸೇವೆ ಮಾಡಿಸುತ್ತಾರೆ. ತಾವು ಡಬಲ್ ಅಹಿಂಸಕರಾಗಿದ್ದೀರಿ, ರಾಜ್ಯವನ್ನು ಪಡೆಯುತ್ತೀರಿ ಆದರೆ ಯಾವುದೇ ಅಸ್ತ್ರ-ಶಸ್ತ್ರಗಳು ಇಲ್ಲ. ಪವಿತ್ರರಾಗುತ್ತೀರಿ ಅವರೆಲ್ಲರೂ ಡಬಲ್ ಹಿಂಸಕರಾಗಿದ್ದಾರೆ. ಒಂದು ವಿಕಾರದಲ್ಲಿ ಹೋಗುತ್ತಾರೆ, ಕಾಮ ಕಠಾರಿಯಿಂದ ಒಬ್ಬಿಬ್ಬರಿಗೆ ದುಃಖ ಕೊಡುತ್ತಾರೆ. ಮತ್ತು ಪರಸ್ಪರ ಹೊಡೆದಾಡುತ್ತಿರುತ್ತಾರೆ. ಈಗಿನಕಾಲದಲ್ಲಿ ಎಷ್ಟೊಂದು ದುಃಖದ ಬೆಟ್ಟ ಬೀಳುತ್ತದೆ. ಮನುಷ್ಯರಲ್ಲಿ ಕ್ರೋಧ ಎಷ್ಟು ದೊಡ್ಡದಾಗಿದೆ. ತಮಗೆ ತಾವೇ ಕಪಾಳಕ್ಕೆ ಹೊಡೆದುಕೊಳ್ಳುತ್ತಾರೆ. ಎಲ್ಲರ ಗ್ಲಾನಿ ಮಾಡುತ್ತಿರುತ್ತಾರೆ. ಇದೂ ಸಹ ಡ್ರಾಮದಲ್ಲಿ ನಿಗದಿಯಾಗಿದೆ. ಎಲ್ಲರೂ ಬೀಳಲೇ ಬೇಕು. ಈಗ ತಮ್ಮದು ಏರುವಕಲೆಯಾಗಿದೆ. ತಾವು ಸ್ವರ್ಗದ ರಚಯಿತ ರಾಜಯೋಗವನ್ನು ಕಲಿಸುವಂತಹ ಆ ಭಗವಂತ ಬಂದಿದ್ದಾರೆ ಎಂದು ಡಂಗೂರ ಹೊಡೆಸಿ. ಅವರು ತಮ್ಮ ಅಂಗೈಲ್ಲಿ ರಾಜ್ಯಭಾಗ್ಯವನ್ನು ತಂದಿದ್ದಾರೆ. ಕೃಷ್ಣನನ್ನು ನಾವು ಭಗವಂತ ಎಂದು ಹೇಳುವುದಿಲ್ಲ. ಅವರು ದೈವೀಗುಣಗಳುಳ್ಳ ಮನುಷ್ಯ ಆಗಿದ್ದಾನೆ. ಬ್ರಹ್ಮಾ-ವಿಷ್ಣು-ಶಂಕರರಿಗೆ ದೇವತೆ ಎಂದು ಹೇಳಲಾಗುತ್ತದೆ. ಅವರಿಗೂ ದೈವೀಗುಣಗಳುಳ್ಳ ಮನುಷ್ಯರು ಎಂದು ಹೇಳುವುದಿಲ್ಲ. ದೈವೀಗುಣಗಳು ಸತ್ಯಯುಗೀ ಮನುಷ್ಯರಲ್ಲಿ ಇರುತ್ತದೆ. ಆಸುರೀಗುಣಗಳು ಕಲಿಯುಗೀ ಮನುಷ್ಯರಲ್ಲಿ ಇದೆ. ದೈವೀಗುಣದವರು ಹಾಗೂ ಆಸುರೀಗುಣದವರು ಮನುಷ್ಯರೇ ಆಗುತ್ತಾರೆ. ತಾವು ತಂದೆಯನ್ನು ಏಕೆ ಮರೆಯುತ್ತೀರಿ ಎಂದು ತಂದೆ ಕುಳಿತು ತಿಳಿಸುತ್ತಾರೆ. ಗಳಿಗೆ-ಗಳಿಗೆ ನನ್ನನ್ನು ನೆನಪು ಮಾಡಿ. ತಮ್ಮ 84 ಜನ್ಮಗಳು ಈಗ ಪೂರ್ಣ ಆಗಿದೆ. ಈಗ ನಾನು ನಿಮಗೆ ರಾಜಯೋಗವನ್ನು ಕಲಿಸಲು ಬಂದಿದ್ದೇನೆ ಆದರೂ ತಾವು ಗಳಿಗೆ-ಗಳಿಗೆ ಇದನ್ನು ಮರೆತುಬಿಡುತ್ತೀರಿ. ದೇಹಾಭಿಮಾನವನ್ನು ಬಿಟ್ಟು ತಮ್ಮನ್ನು ಅಶರೀರಿ ಎಂದು ತಿಳಿಯಿರಿ.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ತಂದೆಯ ಸಮಾನ ತ್ರಿಕಾಲದರ್ಶಿ, ತ್ರಿನೇತ್ರಿ, ತ್ರಿಲೋಕಿನಾಥರಾಗಬೇಕು. ತಂದೆಯ ಮಹಿಮೆಯಲ್ಲಿ ಸ್ವಯಂನ್ನು ಮಾಸ್ಟರ್ ಮಾಡಿಕೊಳ್ಳಬೇಕು.

2. ಡಬಲ್ ಅಹಿಂಸಕರಾಗಬೇಕು. ಎಂದೂ ವಿಕಾರದ ವಶೀಭೂತರಾಗಿ ಹಿಂಸೆ ಮಾಡಬಾರದು. ತಂದೆಗೆ ಸಹಯೋಗಿ ಆಗಿ ಎಲ್ಲರನ್ನು ಪಾವನರನ್ನಾಗಿ ಮಾಡುವ ಸೇವೆ ಮಾಡಬೇಕು.

ವರದಾನ: ಜ್ವಾಲಾರೂಪದ ನೆನಪಿನ ಮೂಲಕ ಸ್ವಯಂ ಅನ್ನು ಪರಿವರ್ತನೆ ಮಾಡಿಕೊಂಡು ಬ್ರಾಹ್ಮಣರಿಂದ ಫರಿಸಶ್ತಾ, ಇಂದ ದೇವತಾ ಭವ.

ಯಾವ ರೀತಿ ಅಗ್ನಿಯಲ್ಲಿ ಯಾವುದೇ ವಸ್ತು ಹಾಕಿದರೂ ಸಹ ಅದರ ಹೆಸರು, ರೂಪ, ಗುಣ ಎಲ್ಲವೂ ಬದಲಾವಣೆಯಾಗಿ ಬಿಡುವುದು. ಅದೇ ರೀತಿ ಯಾವಾಗ ತಂದೆಯ ನೆನಪಿನ ಲಗನ್ ನ ಅಗ್ನಿಯಲ್ಲಿ ಬೀಳುವಿರಾದರೆ ಪರಿವರ್ತನೆಯಾಗಿ ಬಿಡುವಿರಿ. ಮನುಷ್ಯರಿಂದ ಬ್ರಾಹ್ಮಣ, ನಂತರ ಬ್ರಾಹ್ಮಣರಿಂದ ಫರಿಶ್ಥ ಅದರಿಂದ ದೇವತಾ ಆಗಿ ಬಿಡುವಿರಿ. ಯಾವ ರೀತಿ ಹಸಿ ಮಣ್ಣನ್ನು ಅಚ್ಚಿನಲ್ಲಿ ಹಾಕಿ ಬೆಂಕಿಯಲ್ಲಿ ಹಾಕುತ್ತಾರೆ. ಆಗ ಇಟ್ಟಿಗೆ ಯಾಗುವುದು, ಅದೇ ರೀತಿ ಇಲ್ಲಿಯೂ ಸಹ ಪರಿವರ್ತನೆಯಾಗಿ ಬಿಡುವುದು. ಆದ್ದರಿಂದ ನೆನಪನ್ನು ಜ್ವಾಲಾರೂಪವೆಂದು ಹೇಳಲಾಗುವುದು.

ಸ್ಲೋಗನ್: ಶಕ್ತಿಶಾಲಿ ಆತ್ಮ ಇವರೇ ಆಗಿದ್ದಾರೆ, ಯಾರು ಯಾವಾಗ ಬೇಕೊ ಆಗ ಶೀತಲ ಸ್ವರೂಪ ಮತ್ತು ಯಾವಾಗ ಬೇಕೊ ಆಗ ಜ್ವಾಲಾ ರೂಪ ಧಾರಣೆ ಮಾಡುತ್ತಾರೆ.